ಸಿ ಸಿ ನಂ. ೩೩೬ /2015

ಸಾಕ್ಷಿಗೆ ದಿನಾಂಕ 04-11-2022 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 2 P.W.: 1

| | | |
|---|---|---|
| ಹೆಸರು | : | ಮಹಬೂಬ್ ಸಾಬ್ |
| ತಂದೆಯ ಹೆಸರು | : | ಹಸನ್ ಸಾಬ್ |
| ವಯಸ್ಸು | : | 70 ವರ್ಷ |
| ಉದ್ಯೋಗ | : | ಚಾಲಕರು |
| ವಾಸ ಸ್ಥಳ | : | ಹಡಗಲಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ನಾನು ಈಗ್ಗೆ 7-೮ ವರ್ಷಗಳ ಹಿಂದೆ ಮಹೀಂದ್ರಾ ಬೋಲೆರೋ ಪಿಕಫ್ ವಾಹನದ ಚಾಲಕನಾಗಿದ್ದು ಅದರ ನಂಬರನ್ನು ಹೇಳಲು ಆಗುವುದಿಲ್ಲ. ನಾವು ಪ್ರತಿದಿನ ಬೆಳಿಗ್ಗೆ ವ್ಯಾನಿನಲ್ಲಿ ಕೊಟ್ಟೂರಿಗೆ ಹೋಗಿ ಅಲ್ಲಿಂದ ಕೋಳಿಗಳನ್ನು ಲೋಡ್ ಮಾಡಿಕೊಂಡು ಹಡಗಲಿಗೆ ಬರುತ್ತಿದ್ದೆವು. ಆ ದಿನ ನಾನು ಮತ್ತು ಚಾಸಾ-1 ಟೀಯನ್ನು ಕುಡಿಯಲು ನಿಲ್ಲಿಸಿದೆವು. ಟೀಯನ್ನು ಕುಡಿದು ಬೆಳಿಗೆಗ ೩ ಗಂಟೆ ಸಮಯದಲ್ಲಿ ಕೊಟ್ಟೂರಿಗೆ ಕೋಳಿಯನ್ನು ತರಲು ಮುಂದೆ ಹೋಗಿದ್ದು ಆಗ ೧ ರಿಂದ ೪ ನೇ ಆರೋಪಿತರು ಪೋಲೀಸ್ ಸಮವಸ್ತ್ರದಲ್ಲಿ ನಮ್ಮನ್ನು ಎರಡು ದ್ವಿಚಕ್ರ ವಾಹನಗಳಲ್ಲಿ ಹಿಂಭಾಲಿಸಿಕೊಂಡು ಬಂದಿದ್ದು ಅಲಬೂರಿನ ದಿಬ್ಬದಹಳ್ಳಿಯ ಹತ್ತಿರ ನಮ್ಮ ಗಾಡಿಯನ್ನು ನಿಲ್ಲಿಸಿ ನಮ್ಮ ಗಾಡಿಯಲ್ಲಿ ಗಾಂಜಾ ಇರುವುದಾಗಿ ಮಾಹಿತಿ ಬಂದಿದೆ ಎಂದು ತಿಳಿಸಿದ್ದು, ನಾನು ನಮ್ಮ ಗಾಡಿಯನ್ನು ಪಕ್ಕಕ್ಕೆ ನಿಲ್ಲಿಸುತ್ತಿದ್ದು ಆ ತಕ್ಷಣವೇ ಆ ಸದರಿ ಆರೋಪಿತರು ನನ್ನ ವಾಹನದ ಬೀಗವನ್ನು ಕಿತ್ತುಕೊಂಡರು ಹಾಗೂ ನಮ್ಮ ವಾಹನವನ್ನು ಪೂರ್ತಿಯಾಗಿ ಪರಿಶೀಲಿಸಿದರು. ಒಬ್ಬ ಆರೋಪಿಯು ನನ್ನನ್ನು ಸುತ್ತುವರಿದಿದ್ದು ಚಾಸಾ-1 ರವರನ್ನು ಇನ್ನೊಬ್ಬ ಆರೋಪಿಯು ಸುತ್ತುವರಿದಿದ್ದನು. ಆ ನಂತರ ಒಬ್ಬ ಆರೋಪಿಯು ವಾಹನದ ಎಡಗಡೆಯ ಬಾಗಿಲನ್ನು ತೆಗೆದು ಒಳಗೆ ನುಗ್ಗಿ ನಾವು ಕೋಳಿಯನ್ನು ಖರೀದಿಸಲು ಇಟ್ಟಿದ್ದಂತಹ ದುಡ್ಡನ್ನು ತೆಗೆದುಕ್ಕೊಲು ಪ್ರಯತ್ನಿಸಿದ್ದು ನಾವು ಕೊಟ್ಟಿರುವುದಿಲ್ಲ. ಆಗ ನನಗೆ ಅಜರುದ್ದೀನ್ ಎಂಬ ವ್ಯಕ್ತಿಯು ಕರಾಟೆಯ ಚೈನಿನಿಂದ ಕಾಲಿಗೆ ಹೊಡೆದರು. ಆ ನಂತರ

ಇನ್ನೊಬ್ಬ ವ್ಯಕ್ತಿಯು ಚಾಸಾ-1 ರವರಿಗೆ ಹೊಡೆದರು. ನಾವು ಗಾಡಿಯನ್ನು ತೆಗೆದುಕೊಂಡು ಠಾಣೆಗೆ ಬರುವುದಾಗಿ ತಿಳಿಸಿದರು. ಆರೋಪಿತರು ಅವರಿಗೆ ಹಣವನ್ನು ಕೊಡುವಂತೆ ಹಾಗೂ ನಂತರದಲ್ಲಿ ಗಾಡಿಯನ್ನು ತೆಗೆದುಕೊಂಡು ಠಾಣೆಗೆ ಬರುವಂತೆ ತಿಳಿಸಿದರು. ಆ ನಂತರ ನಾವು ನಮ್ಮ ವಾಹನದ ಕೀಯನ್ನು ಕೊಡುವಂತೆ ಆರೋಪಿತರನ್ನು ಕೇಳಿದೆವು. ಆದರೆ ಆರೋಪಿತರು ನಮಗೆ ಕೀಯನ್ನು ಕೊಡದೇ ಅಲ್ಲೇ ಇದ್ದಂತಹ ಗಿಡಗಂಟಿಗಳ ಮಧ್ಯ ಬೀಗವನ್ನು ಎಸೆದರು. ಆ ಸಮಯಕ್ಕೆ ನಾನು ನನ್ನ ಪೋನನ್ನು ಅಲ್ಲೇ ಎಸೆದಿದ್ದೆ. ಚಾಸಾ-1 ರವರ ಪೋನನ್ನು ಆರೋಪಿತರು ತೆಗೆದುಕೊಂಡು ಹೋದರು. ಆ ನಂತರ ಸದರಿ ಆರೋಪಿತರು ನಮ್ಮಿಂದ ಹಣವನ್ನು ಕಿತ್ತುಕೊಂಡು ಬೈಕಿನಲ್ಲಿ ಹೋದರು. ಆ ನಂತರ ನಾನು ನನ್ನ ಮೊಬೈಲನ್ನು ಹುಡುಕಿದ್ದು ಸಿಕ್ಕಿರುತ್ತದೆ. ಆ ನಂತರ ನಾವು ಚಾಸಾ-5 ರವರಿಗೆ ಫೋನ್ ಮಾಡಿ ಕಳ್ಳರು ನಮಗೆ ಹೊಡೆದಿರುವುದಾಗಿ ಹಾಗೂ ನಮ್ಮ ಬಳಿ ಇದ್ದಂತಹ ಹಣವನ್ನು ಕಿತ್ತುಕೊಂಡು ಹೋಗಿರುವುದಾಗಿ ತಿಳಿಸಿದೆವು. ಚಾಸಾ-5 ರವರು ಪೋಲೀಸರಿಗೆ ಕರೆಯನ್ನು ಮಾಡಿ ತಿಳಿಸುವುದಾಗಿ ಹೇಳಿದರು. ಆ ನಂತರ ಸದರಿ ಆರೋಪಿತರ ಬೈಕಿನ ಲೈಟಿನಲ್ಲಿರುವ ಬೆಳಕು ನಮಗೆ ಕಂಡುಬಂದಿದ್ದು ಪುನಃ ಅವರು ವಾಪಾಸು ಬರಬಹುದೆಂದು ನಾವು ಅಲ್ಲಿಯೇ ಗಿಡಗಳ ಮಧ್ಯೆ ಅವಿತುಕುಳಿತುಕೊಂಡೆವು. ಆ ನಂತರ ನಾವು ಇದ್ದ ಸ್ಥಳಕ್ಕೆ ಇಬ್ಬರು ಪೋಲೀಸರು ಬಂದರು. ನಾವು ಅಲ್ಲಿ ಇಲ್ಲದ್ದನ್ನು ನೋಡಿ ಚಾಸಾ-5 ರವರು ಪೋಲೀಸರು ಕರೆಯನ್ನು ಮಾಡಿದ್ದು, ಚಾಸಾ-5 ರವರು ನಮಗೆ ಪುನಃ ಕರೆಯನ್ನು ಮಾಡಿ ಬಂದಿರುವಂತಹರು ಪೋಲೀಸರಾಗಿರುತ್ತಾರೆ ಭಯಪಡಬೇಡಿ ಎಂದು ತಿಳಿಸಿದರು. ಆಗ ಒಬ್ಬ ಪೋಲೀಸ್ ನಮ್ಮನ್ನು ಮೋಟಾರು ಸೈಕಲ್ಲಿನಲ್ಲಿ ಇಟ್ಟಿಗಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ಆ ನಂತರ ಇಟ್ಟಿಗಿಯ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನನಗೆ ಎಷ್ಟು ಹಣವಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಚಾಸಾ-1 ರವರು ನನಗೆ ರೂ.1 ಲಕ್ಷದ 25 ಸಾವಿರ ಹಣ ಇರುವುದಾಗಿ ತಿಳಿಸಿದರು.

ಆ ನಂತರ ಪೋಲೀಸರು ನಮ್ಮನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ ನಮ್ಮ ವಾಹನದ ಕೀ ಸಿಕ್ಕಿರುತ್ತದೆ. ಆ ನಂತರ ಬಳ್ಳಾರಿಯಿಂದ ಪೋಲೀಸರು ಬಂದಿದ್ದು ನಮ್ಮನ್ನು ಹೊಡೆದ ಬಗ್ಗೆ ವಿಚಾರಿಸಿದರು. ನಾವು ಪೋಲೀಸರು ಹೋಡೆದಿರುವುದಾಗಿ ತಿಳಿಸಿದೆವು. ಆ ನಂತರ ಇಟ್ಟಿಗಿ ಠಾಣೆಯಲ್ಲಿರುವ ಪೋಲೀಸರನ್ನು ನಮಗೆ ತೋರಿಸಿದ್ದು ಅವರಲ್ಲಿ ಯಾರೂ ಇರುವುದಿಲ್ಲವೆಂದು ಹೇಳಿದೆವು. ಆ ನಂತರ ಕೊಟ್ಟೂರು ಪೊಲೀಸ್ ಠಾಣೆಗೆ ನಮ್ಮನ್ನು ಕರೆದುಕೊಂಡು ಹೋಗಿ ಕೊಟ್ಟೂರು ಠಾಣೆಯಲ್ಲಿರುವ ಪೋಲೀಸರನ್ನು ನಮಗೆ ತೋರಿಸಿದ್ದು ಅವರಲ್ಲಿ ಯಾರೂ ಇರುವುದಿಲ್ಲವೆಂದು ಹೇಳಿದೆವು. ನಂತರ ನಮ್ಮನ್ನು ಇಟ್ಟಗಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದು ಪ್ರಕರಣ ದಾಖಲುಪಡಿದರು. ಆ ನಂತರ ನಾವು ನಮ್ಮ ವಾಹನವನ್ನು ತೆಗೆದುಕೊಂಡು ನಮ್ಮ ಊರಿಗೆ ಹೋದೆವು.

ಆ ನಂತರ 15-20 ದಿನಗಳು ಕಳೆದು ಆರೋಪಿತರು ಸಿಕ್ಕಿರುವ ಬಗ್ಗೆ ನಮಗೆ ತಿಳಿಸಿ ಠಾಣೆಗೆ ಬರುವಂತೆ ನಮಗೆ ತಿಳಿಸಿದರು. ಠಾಣೆಯಲ್ಲಿ 4 ಜನ ಆರೋಪಿತರಿದ್ದು ನಾವು ಗುರುತಿಸಿರುತ್ತೇವೆ. ನಂತರ 4 ಜನ ಆರೋಪಿತರನ್ನು ಹೆಚ್ ಬಿ ಹಳ್ಳಿಯ ತಹಶೀಲ್ದಾರ್ ಕಛೇರಿಗೆ ಕರೆದುಕೊಂಡು ಬಂದರು. ಅಲ್ಲಿ 8 ಜನ ವ್ಯಕ್ತಿಗಳನ್ನು ನಿಲ್ಲಿಸಿ ಅದರಲ್ಲಿ ಆರೋಪಿತರನ್ನು ಗುರುತಿಸುವಂತೆ ಹೇಳಿದರು. ಅವರ ಮುಖಗಳಿಗೆ ಕಪ್ಪು ಬಟ್ಟೆಯನ್ನು ಹಾಕಿದ್ದು ತೆಗೆದ ಕಾರಣ ನಾವು 4 ಜನ ಆರೋಪಿತರನ್ನು ಗುರುತಿಸಿದೆವು. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪೋಲೀಸರು ಜಪ್ತುಪಡಿಸಿಕೊಂಡಿರುವುದಿಲ್ಲ. ನಮ್ಮ ಸಮಕ್ಷಮ ಆರೋಪಿತರನ್ನು ಪೋಲೀಸರು ವಿಚಾರಿಸಿರುವುದಿಲ್ಲ. ನಾನು ಬಗ್ಗೆ ಪೋಲೀಸರ ಸಮಕ್ಷಮ ಹೇಳಿಕೆ ಮತ್ತು ಮರುಹೇಳಿಕೆ ಕೊಟ್ಟಿರುತ್ತೇನೆ.

ಸದರಿ ಹೇಳಿಕೆ, ಮುಂದುವರೆದ ಹೇಳಿಕೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ-1, 1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದ ಫೋಟೊಗಳಲ್ಲಿರುವ ಕೃತ್ಯ ಸ್ಥಳವನ್ನು ವಾಹನವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಸಮಕ್ಷಮದಲ್ಲಿರುವ 2 ಮತ್ತು 3 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 4 ನೇ ಆರೋಪಿಯ ಗೈರುಹಾಜರಾತಿಯಲ್ಲಿ ಆರೋಪಿಯನ್ನು ಗುರುತಿಸಲು ಆರೋಪಿ ಪರ ವಕೀಲರ ತಕರಾರು ಇರುವುದರಿಂದ 4 ನೇ ಆರೋಪಿಯ ಗುರುತಿಸುವಿಕೆಗಾಗಿ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ